# ವೃತ್ತಿಗಿರಲಿ ಅಭಿವೃದ್ಧಿ ಕೌಶಲ್ಯ

ನೇಮಕಾತಿ ಸಂದರ್ಭದಲ್ಲಿ ಕೆಲವು ಕಂಪನಿಗಳು ನಿಮ್ಮನ್ನು ಅಂಕಗಳ ಆಧಾರದಲ್ಲಿ ಅಳೆಯುವುದಿಲ್ಲ. ಬದಲಾಗಿ ನಿಮ್ಮಲ್ಲಿನ ಕೌಶಲ್ಯಗಳು ಹಾಗೂ ವೃತ್ತಿಗೆ ಸಂಬಂಧಿಸಿದ ನಾವೀನ್ಯ ಗುಣಗಳನ್ನು ಹುಡುಕುತ್ತಾರೆ.

■ ಆರ್.ಬಿ. ಗುರುಬಸವರಾಜ

ಪ್ರತಿಯೊಬ್ಬ ಉದ್ಯೋಗಾಕಾಂಕ್ಷಿ ತನ್ನ ವೃತ್ತಿ ಜೀವನದಲ್ಲಿ ಇನ್ನೊಬ್ಬರಿಗಿಂತ ಭಿನ್ನವಾಗಿರಬೇಕೆಂದು ಬಯಸುವುದು ಸಹಜ. ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸಕ್ಕೆ ಸೇರುವುದೇ ಒಂದು ಭಾಗ್ಯ. ಆದರೆ ಮಲ್ಟಿ ನ್ಯಾಷನಲ್ ಕಂಪನಿಗಳು ಕೇವಲ ಶೈಕ್ಷಣಿಕ ಅರ್ಹತೆಯನ್ನು ನೋಡಿ ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲ. ಅಲ್ಲಿ ಕೆಲಸ ಗಿಟ್ಟಿಸಿಕೊಳ್ಳಬೇಕಾದರೆ ಕೆಲವೊಂದು ವೃತ್ತಿ ಕೌಶಲ್ಯಗಳು ಅಗತ್ಯ.

ನೇಮಕಾತಿ ಸಂದರ್ಭದಲ್ಲಿ ಕೆಲವು ಕಂಪನಿಗಳು ನಿಮ್ಮನ್ನು ಅಂಕಗಳ ಆಧಾರದಲ್ಲಿ ಅಳೆಯುವುದಿಲ್ಲ. ಬದಲಾಗಿ ನಿಮ್ಮಲ್ಲಿನ ಕೌಶಲ್ಯಗಳು ಹಾಗೂ ವೃತ್ತಿಗೆ ಸಂಬಂಧಿಸಿದ ನಾವೀನ್ಯ ಗುಣಗಳನ್ನು ಹುಡುಕುತ್ತಾರೆ. ವಿಮರ್ಶಾತ್ಮಕ ಚಿಂತನೆ, ವಿವಿಧ ಕ್ಷೇತ್ರಗಳ ಪರಿಣಿತಿ ಮತ್ತು ಕೆಲವು ಮೂಲಭೂತ ಸಾಮರ್ಥ್ಯಗಳನ್ನು ಅಳೆಯುತ್ತಾರೆ. ಹಾಗಾಗಿ ವೃತ್ತಿಗೆ ಸೇರಿದ ನಂತರ ಗಳಿಸುವ ಕೌಶಲ್ಯಗಳಿಗಿಂತ ವೃತಿ ಸೇರುವ ಮೊದಲೇ ಗಳಿಸಿರುವ ಕೌಶಲ್ಯಗಳಿಗೆ ಹೆಚ್ಚಿನ ಆದ್ಯತೆ ಮತ್ತು ಬೇಡಿಕೆ ಇದೆ. ಶೈಕ್ಷಣಿಕ ಅರ್ಹತೆಯ ಜೊತೆಗೆ ಕೌಶಲ್ಯಗಳ ಭಂಡಾರ ನಿಮ್ಮಲ್ಲಿದ್ದರೆ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಗಿಟ್ಟಿಸುವುದು ಕಷ್ಟವೇನಲ್ಲ. ಅಂತಹ ಕೆಲ ಕೌಶಲ್ಯಗಳು ಇಲ್ಲಿವೆ. ವೃತ್ತಿಯಲ್ಲಿರುವವರೂ ಸಹ ಗಳಿಸಿಕೊಳ್ಳಬೇಕಾದ ಕೌಶಲ್ಯಗಳಿವು.

ಸಂವಹನ ಕೌಶಲ್ಯ: ಉದ್ಯೋಗದಾತರು ಗಮನಿಸುವ ಸಂಭಾವ್ಯ ಕೌಶಲ್ಯವೆಂದರೆ ಸಂವಹನ ಕೌಶಲ್ಯ. ಇತರರೊಂದಿಗೆ ಹೇಗೆ ವರ್ತಿಸುತ್ತೀರಿ? ಹೇಗೆ ವ್ಯವಹರಿಸುತ್ತೀರಿ? ದೂರವಾಣಿಯಲ್ಲಿ ಬಳಸುವ ಭಾಷಾ ಶೈಲಿ ಹೇಗಿದೆ? ಪತ್ರ ವ್ಯವಹಾರ ತಿಳಿದಿದ್ದೀರಾ? ಬರಹದಲ್ಲಿ ಏನಾದರೂ ನಾವಿನ್ಯತೆಗಳು ಇವೆಯಾ? ಮುಂತಾದ ಅಂಶಗಳನ್ನು ಗಮನಿಸುತ್ತಾರೆ. ಅದಕ್ಕಾಗಿ ನೀವು ಉತ್ತಮ ಸಂವಹನಕಾರರು ಆಗಬೇಕಾದುದು ಅಗತ್ಯ. ಭಾಷಾ ಕೌಶಲ್ಯಗಳನ್ನು ಮತ್ತು ವ್ಯಾಕರಣ ತಿಳಿದಿರಬೇಕು. ಉದ್ಯೋಗದಾತರು ಹೇಳುವ ಸೂಚನೆಗಳನ್ನು ಸರಿಯಾಗಿ ಅರ್ಥೈಸಿಕೊಂಡು ಅದಕ್ಕೆ ಪೂರಕವಾಗಿ ಹೊಸತನದ ಶೈಲಿಯಲ್ಲಿ ಉತ್ತರಿಸುವ ಜಾಣ್ಮೆ ಬೆಳೆಸಿಕೊಳ್ಳಿ. ಸಹೋದ್ಯೋಗಿಗಳು ಮತ್ತು ಗ್ರಾಹಕರೊಂದಿಗೆ ಸಂವಹನ ನಡೆಸುವ ವಿವಿಧ ತಂತ್ರಗಾರಿಕೆ ಅಳವಡಿಸಿಕೊಳ್ಳಿ.

ವಿಶ್ಲೇಷಣಾ ಮತ್ತು ಸಂಶೋಧನಾ ಕೌಶಲ್ಯ: ನಿಮಗೆ ನೀಡಿದ ಪ್ರಶ್ನೆ ಅಥವಾ ಸಮಸ್ಯೆ ಕೇಕ್‌ನ ಒಂದು ತುಂಡು ಎಂದು ತಿಳಿದು ಬಹಳ ಎಚ್ಚರಿಕೆಯಿಂದ ಉತ್ತರ ನೀಡಿ. ಪರಿಸ್ಥಿತಿಯನ್ನು ವಿಶ್ಲೇಷಿಸಲು ಸಮಯ ತೆಗೆದುಕೊಳ್ಳಿ. ಸಂಭವನೀಯ ಸನ್ನಿವೇಶಗಳ ಬಗ್ಗೆ ಯೋಚಿಸಿ. ಸಾಧ್ಯವಾದರೆ ಇನ್ನಷ್ಟು ಸಂಶೋಧನೆ ಮಾಡಲು ಸಮಯ ಕೇಳಿಕೊಳ್ಳಿ. ವಿಶ್ಲೇಷಣಾತ್ಮಕ ಹಾಗೂ ಬಲವಾದ ಸಂಶೋಧನಾತ್ಮಕ ಉತ್ತರವು ನಿಮ್ಮನ್ನು ಇತರರಿಂದ ಪ್ರತ್ಯೇಕಿಸುತ್ತದೆ. ವಿವಿಧ ಸನ್ನಿವೇಶಗಳಲ್ಲಿ ನಿಮ್ಮ ನಿರ್ಣಯ ಸಾಮರ್ಥ್ಯವನ್ನು ಹಾಗೂ ನಿರ್ಣಯದ ಬದ್ಧತೆಯನ್ನು ಪ್ರದರ್ಶಿಸುತ್ತದೆ.

ಹೊಂದಾಣಿಕೆ ಕೌಶಲ್ಯ: ಏಕ ಕಾಲದಲ್ಲಿ ಅನೇಕ ಕಾರ್ಯಯೋಜನೆಗಳನ್ನು ನಿರ್ವಹಿಸುವ ಸಾಮರ್ಥ್ಯ ಮತ್ತು ಬದಲಾಗುತ್ತಿರುವ ಸ್ಥಿತಿಗತಿಗಳ ನಿರ್ವಹಣೆ ಮತ್ತು ಪರಿಸರಕ್ಕೆ ತಕ್ಕಂತೆ ಹೊಂದಿಕೊಳ್ಳುವ ಕೌಶಲ್ಯ ಅಗತ್ಯ. ಕಂಪನಿಯ ನಿಯಮಗಳಡಿ ಕಾರ್ಯ ನಿರ್ವಹಿಸಲು ಹೊಂದಾಣಿಕೆ ಕೌಶಲ್ಯ ಬಹಳ



ಮೆಚ್ಚುಗೆ ಪಡೆಯುತ್ತದೆ. ಇಂದಿನ ಆಧುನಿಕ ಜಗತ್ತಿನಲ್ಲಿ ಉದ್ಯೋಗದ ಸ್ವರೂಪವು ವೈವಿಧ್ಯಮಯವಾಗಿದೆ. ಅದು ಕಾಲ ಮತ್ತು ಸ್ಥಳಕ್ಕೆ ತಕ್ಕಂತೆ ಬದಲಾಗುತ್ತಿರುತ್ತದೆ. ಬದಲಾಗುತ್ತಿರುವ ಸಂದರ್ಭಗಳಲ್ಲಿ ಕೆಲಸ ಮಾಡಲು ಸಿದ್ಧವಿರುವ ಉದ್ಯೋಗಿಗಳಿಗೆ ಹೆಚ್ಚು ಬೇಡಿಕೆ ಇದೆ. ಒಂದು ಪರಿಸರದಿಂದ